ವೃದ್ಧಿಯಾಗಿತ್ತು. ಈಗ ಮೊದಲಿನ ಸ್ಥಿತಿಗೇ ಹಿಂತಿರುಗಿದ್ದೇವೆ. ಜವಳಿ ಉದ್ಯಮಕ್ಕೆ ಹೊಸ ಜವಳಿ ನೀತಿ ಜಾರಿಯಾಗುವುದಿದೆ, ಅದರಿಂದ ನಮ್ಮ ಮಿಲ್ಲುಗಳಿಗೆ ಸಹಾಯವಾಗಬಹುದೇ ಎಂಬ ನಿರೀಕ್ಷೆಯಲ್ಲಿದ್ದೇವೆ' ಎನ್ನುವ ಆಶಾಭಾವ ಮಿಲ್ ಓನರ್‌ಗಳದು. ಅವರೀಗ ಉದ್ಯಮ ನಡೆಸುವುದೋ, ಬಿಡುವುದೋ ಎಂಬ ಸಂದಿಗ್ಧದಲ್ಲಿದ್ದಾರೆ. ಲಕ್ಷಾಂತರ ಜನರಿಗೆ ಉದ್ಯೋಗ ನೀಡಿರುವ ಸೆಣಬಿನ ಉದ್ಯಮಗಳು ನಿಧಾನವಾಗಿ ಕಣ್ಮುಚ್ಚುತ್ತಿವೆ.

## ನೈಸರ್ಗಿಕ ಸೆಣಬಿಗೆ ಪ್ಲಾಸ್ಟಿಕ್ ಸವಾಲು

ಸೆಣಬು ಕಾರ್ಕೋರಸ್ ಕುಲಕ್ಕೆ ಸೇರಿದ ಸಸ್ಯಗಳಿಂದ ದೊರಕುವ ನೈಸರ್ಗಿಕ ನಾರು. ಇದರಿಂದ ಚೀಲ, ಕಾರ್ಪೆಟ್, ಬೆಲ್ಟು ಸೇರಿದಂತೆ ವಿವಿಧ ಉತ್ಪನ್ನಗಳನ್ನು ತಯಾರಿಸಬಹುದು.

ಸೆಣಬಿನ ಗಿಡಗಳು ಬಿತ್ತನೆ ಮಾಡಿದ 150 ದಿನಗಳಲ್ಲಿ ಕೊಯಿಲಿಗೆ ಬರುತ್ತವೆ. ಕಾಂಡಗಳನ್ನು ನೆಲಕ್ಕೆ ಹತ್ತಿರವಾಗಿ ಕತ್ತರಿಸಿದ ನಂತರ 'ರೆಟ್ಟಿಂಗ್' ಮಾಡಲಾಗುತ್ತದೆ. ಸೆಣಬಿನ ಕಾಂಡಗಳಿಂದ ನಾರುಗಳನ್ನು ಹೊರತೆಗೆಯುವ ಪ್ರಕ್ರಿಯೆಯೇ ರೆಟ್ಟಿಂಗ್. ಈ ರೆಟ್ಟಿಂಗ್‌ನಲ್ಲಿ ಸೆಣಬಿನ ಕಾಂಡದಿಂದ ನಾರನ್ನು ತೆಗೆಯಲಾಗುತ್ತದೆ, ನೈಸರ್ಗಿಕ ಬ್ಯಾಕ್ಟೀರಿಯಾಗಳು ನಾರಿನಂಶವಿರದ ಕಾಂಡದ ಭಾಗವನ್ನು ಕೊಳೆಸುತ್ತವೆ. ಆಗ ಶುದ್ಧ ನಾರು ದೊರಕುತ್ತದೆ. ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ಮತ್ತು ಇತರೆ ಸಂಸ್ಕರಿತ ಉತ್ಪನ್ನಗಳ ದೊರಕುವಿಕೆ ಹೆಚ್ಚಾದ್ದರಿಂದ ನೈಸರ್ಗಿಕ ಸೆಣಬಿನ ಉತ್ಪನ್ನಗಳಿಗೆ ಬೇಡಿಕೆ ಗಣನೀಯವಾಗಿ ಕುಸಿಯುತ್ತಿದೆ.

ಏರುತ್ತಿರುವ ಉತ್ಪಾದನಾ ವೆಚ್ಚ, ನಾವೀನ್ಯತೆ ಕಾಣದ ಯಂತ್ರೋಪಕರಣಗಳು, ಕೆಲಸಗಾರರ ಅಲಭ್ಯತೆ, ವೈವಿಧ್ಯತೆಯಿರದ ಉತ್ಪನ್ನಗಳಿಂದಾಗಿಯೂ ಸೆಣಬಿನ ಉದ್ಯಮ ಮತ್ತು ವ್ಯವಹಾರ ಎರಡೂ ಸಂಕಷ್ಟದಲ್ಲಿವೆ. ಸೆಣಬಿನ ಮಿಲ್‌ಗಳಿಂದ ಹೊಮ್ಮುವ ಕಸ ನಿರ್ವಹಣೆಯ ಸಮಸ್ಯೆ ದೊಡ್ಡದಾಗಿದೆ. ಅದಕ್ಕೆ ಸರ್ಕಾರದ ಬಳಿಯಾಗಲಿ, ಉದ್ಯಮಗಳ ಬಳಿಯಾಗಲಿ ಪರಿಹಾರಗಳಿಲ್ಲ.

ಸೆಣಬಿನ ಉದ್ಯಮಕ್ಕೆ ಕಸುವು ತುಂಬಲು ಸರ್ಕಾರಗಳು ಸಂಶೋಧನೆ ಮತ್ತು ಅಭಿವೃದ್ಧಿ ಆಧರಿತ ಉತ್ಪನ್ನಗಳ ತಯಾರಿಕೆಗೆ ನೆರವಾಗಲು 'ಜ್ಯೂಟ್ ಇಂಟೆಗ್ರೇಟೆಡ್ ಡೆವಲಪ್‌ಮೆಂಟ್ ಸ್ಕೀಂ' (ಜೆಐಡಿಎಸ್), ಉತ್ಪನ್ನಗಳಲ್ಲಿ ನಾವೀನ್ಯತೆ ತರಲು 'ಜ್ಯೂಟ್ ಟೆಕ್ನಾಲಜಿ ಮಿಷನ್', ಉದ್ಯಮಗಳಿಗೆ ಕಚ್ಚಾ ಸೆಣಬು ಪೂರೈಸುವ ರೈತರಿಗೆ ಸಹಾಯವಾಗಲೆಂದು 'ಜ್ಯೂಟ್ ರಾ ಮೆಟೀರಿಯಲ್ ಬ್ಯಾಂಕ್' (ಜೆಆರ್‌ಎಂಬಿ) ಮತ್ತು ಸೆಣಬಿನ ಇಳುವರಿ ಮತ್ತು ಗುಣಮಟ್ಟ ಹೆಚ್ಚಿಸಲು 'ಜ್ಯೂಟ್ ಐಕೇರ್' (ಜ್ಯೂಟ್ ಇಂಪ್ರೂವ್ಡ್ ಕಲ್ಟಿವೇಷನ್ ಅಂಡ್ ಅಡ್ವಾನ್ಸ್ಡ್ ರೆಟ್ಟಿಂಗ್ ಎಕ್ಸೈರ್ಸೈಜ್) ಹೆಸರಿನ ವಿನೂತನ ಯೋಜನೆಗಳು ಜಾರಿಯಲ್ಲಿವೆ. ಸಂಶೋಧನೆ ಮತ್ತು ಅಭಿವೃದ್ಧಿಗಾಗಿಯೇ ಇರುವ 'ದಿ ಜ್ಯೂಟ್ ಫೌಂಡೇಶನ್' (ಜೆಟಿಎಫ್) ಹೊಸ ಬಗೆಯ ತಂತ್ರಜ್ಞಾನವನ್ನು ಮಿಲ್‌ಗಳಿಗೆ ಒದಗಿಸುವಲ್ಲಿ ನಿರತವಾಗಿದೆ. ಸೆಣಬಿನ ಉತ್ಪನ್ನಗಳ ಉದ್ಯಮಗಳ ಅಭಿವೃದ್ಧಿ, ಪ್ರಚಾರ, ಪ್ರೋತ್ಸಾಹ, ಮಾರುಕಟ್ಟೆ ನೆರವು ಹಾಗೂ ವಿಸ್ತರಣೆಗಳಿಗಾಗಿ ದುಡಿಯುತ್ತಿರುವ 'ನ್ಯಾಷನಲ್ ಜ್ಯೂಟ್ ಫೌಂಡೇಷನ್' ದೇಶದ ಹೊರಗೆ ಮತ್ತು ಒಳಗೆ ಸೆಣಬಿನ ಉತ್ಪನ್ನಗಳನ್ನು ಜನಪ್ರಿಯಗೊಳಿಸಲು ಶ್ರಮಿಸುತ್ತಿದೆ.

2022ರ ಸೆಣಬಿನ ರಫ್ತು ಪ್ರಮಾಣ ಬರೋಬ್ಬರಿ ಎಂಟು ನೂರು ಕೋಟಿ ರೂಪಾಯಿಗಳಷ್ಟಿತ್ತು. ಅಮೆರಿಕ ಮತ್ತು ಯೂರೋಪ್‌ಗಳು ನಮ್ಮಿಂದ ಅತಿಹೆಚ್ಚು ಸೆಣಬು ಆಮದು ಮಾಡಿಕೊಳ್ಳುವ ದೇಶಗಳಾಗಿವೆ. ವರ್ಷದಿಂದ ವರ್ಷಕ್ಕೆ ಸೆಣಬು ರಫ್ತಿನ ಪ್ರಮಾಣ ಏರಿಕೆ ಕಂಡಿದೆ. ಕಳೆದ ವರ್ಷ ತೊಂಬತ್ತೆಂಟು ದಶಲಕ್ಷ ರೂಪಾಯಿ ಮೌಲ್ಯದ ನೆಲಹಾಸು ಮತ್ತು ಚೀಲಗಳನ್ನು ಅಮೆರಿಕ ನಮ್ಮಿಂದ ತರಿಸಿಕೊಂಡಿದೆ. ವೈವಿಧ್ಯಮಯ ಉತ್ಪನ್ನಗಳಾದ ಕೈಚೀಲ, ಶಾಪಿಂಗ್ ಬ್ಯಾಗ್, ಉಡುಗೊರೆ ವಸ್ತು, ಅಲಂಕಾರಿಕ ಬಟ್ಟೆಗಳಿಗೆ ಹೊರದೇಶಗಳಲ್ಲಿ ಭಾರೀ ಬೇಡಿಕೆ ಇದೆ. 2021–22ರ ಅವಧಿಯಲ್ಲಿ ಅಮೆರಿಕಕ್ಕೆ ನಾವು ರಫ್ತು ಮಾಡಿದ ಸೆಣಬಿನ ಉತ್ಪನ್ನಗಳ ಒಟ್ಟು ಮೌಲ್ಯವು 17 ಕೋಟಿ ಡಾಲರ್‌ಗಳಷ್ಟಿತ್ತು.

### ಹಸಿರು ಗೊಬ್ಬರವಾಗಿ ಸೆಣಬು

ರೈತರು ಬೆಳೆಯುವ ಭತ್ತದ ಇಳುವರಿಯನ್ನು ಹೆಚ್ಚಿಸಿಕೊಳ್ಳಲು ಸೆಣಬು ಹಸಿರು ಗೊಬ್ಬರವಾಗಿ ಕೆಲಸ ಮಾಡುತ್ತದೆ. ಮುಂಗಾರು ಮಳೆಯ ದಿನಗಳಲ್ಲಿ ಭತ್ತ ನಾಟಿ ಮಾಡುವುದಕ್ಕೂ ಒಂದು ತಿಂಗಳು ಮುಂಚೆ ಸೆಣಬಿನ ಬೀಜಗಳನ್ನು ಎಕರೆಗೆ 20 ಕೆಜಿಯಂತೆ ಬಿತ್ತನೆ ಮಾಡಬೇಕು. 30ರಿಂದ 45 ದಿನಗಳಲ್ಲಿ ಸೆಣಬಿನ ಸಸಿಗಳು ಮೂರರಿಂದ ನಾಲ್ಕು ಅಡಿ ಎತ್ತರಕ್ಕೆ ಬೆಳೆಯುತ್ತವೆ. ಬೆಳೆದಿರುವ ಸೆಣಬನ್ನು ಕಟಾವು ಮಾಡದೆ ಉಳುಮೆಯ ಮೂಲಕ ಮಣ್ಣಿಗೆ ಸೇರಿಸಲಾಗುತ್ತದೆ. ಎಕರೆಗೆ 10ರಿಂದ 12 ಟನ್ ಹಸಿ ಸೊಪ್ಪು ದೊರಕುತ್ತದೆ. ಹೀಗೆ ಮಾಡಿದಾಗ ಸಾರಜನಕದ ಜೊತೆ ರಂಜಕ, ಪೊಟ್ಯಾಷ್ ಮತ್ತು ಇತರೆ ಲಘು ಪೋಷಕಾಂಶಗಳು ಮಣ್ಣಿಗೆ ದೊರಕುತ್ತವೆ. ಸೂಕ್ಷ್ಮಾಣು ಜೀವಿಗಳ ಸಂಖ್ಯೆ ಹೆಚ್ಚಾಗುತ್ತದೆ. ಆಗ ಮಣ್ಣು ಮೃದುವಾಗಿ ಫಲವತ್ತತೆ ಹೆಚ್ಚುತ್ತದೆ.

ಹಿಂದಿನ ದಿನಗಳಲ್ಲಿ ಕಾಡಿನಿಂದ ಸೊಪ್ಪನ್ನು ತಂದು ಹಸಿರು ಗೊಬ್ಬರ ತಯಾರಿಸಲಾಗುತ್ತಿತ್ತು. ಕೃತಕ ಪೋಷಕಾಂಶಗಳ ತಯಾರಿಕೆ ದುಬಾರಿಯಾಗಿರುವ ಇಂದಿನ ಕಾಲದಲ್ಲಿ, ಮಣ್ಣಿನ ಫಲವತ್ತತೆ ಹೆಚ್ಚಿಸಲು ಕೃಷಿ ಇಲಾಖೆಯು ಎಕರೆಗೆ ಅನುಗುಣವಾಗಿ ಸೆಣಬಿನ ಬೀಜಗಳನ್ನು ರೈತರಿಗೆ ವಿತರಿಸುತ್ತದೆ. ಕರ್ನಾಟಕದಲ್ಲಿ ಕಬ್ಬು ಬೆಳೆಯುವ ರೈತರು ಸಹ ಇಳುವರಿ ಹೆಚ್ಚಿಸಿಕೊಳ್ಳಲು ಸೆಣಬಿನ ಬೆಳೆ ಬೆಳೆದು, ಅದನ್ನೇ ಹಸಿರು ಗೊಬ್ಬರವಾಗಿ ಬಳಸುವುದನ್ನು ರೂಢಿ ಮಾಡಿಕೊಂಡಿದ್ದಾರೆ.



### ಫ್ಯಾಕ್ಟ್ ಶೀಟ್

- ಬಾಂಗ್ಲಾದೇಶವು 800 ದಶಲಕ್ಷ ಡಾಲರ್ ಮೌಲ್ಯದ ಸೆಣಬಿನ ಉತ್ಪನ್ನಗಳನ್ನು ರಫ್ತು ಮಾಡಿ ದಾಖಲೆ ಬರೆದಿದೆ.
- ತುಂಗಭದ್ರಾ ಜಲಾಶಯದ ಕಾಲುವೆಗಳ ನೀರನ್ನು ನಂಬಿಕೊಂಡು ವ್ಯವಸಾಯ ಮಾಡುವ ರೈತರು ವಾರ್ಷಿಕ 4500 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಹಾಗೂ 2500 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯುತ್ತಾರೆ. ಬೆಳೆಗಳ ಇಳುವರಿ ಹೆಚ್ಚಿಸಿಕೊಳ್ಳಲು ಸೆಣಬಿನ ಬೆಳೆ ಬೆಳೆದು ಅದನ್ನೇ ಹಸಿರು ಗೊಬ್ಬರವಾಗಿ ಬಳಸುತ್ತಾರೆ.
- ಹತ್ತಿಯ ನಂತರ ಸೆಣಬು ಭಾರತದಲ್ಲಿ ಎರಡನೇ ಪ್ರಮುಖ ನೈಸರ್ಗಿಕ ನಾರಿನ ಬೆಳೆಯಾಗಿದೆ.
- ತನ್ನ ಜೈವಿಕ ಅವನತಿ (ಬಯೊಡಿಗ್ರೇಡಬಲ್) ಗುಣದಿಂದಾಗಿ ಸೆಣಬು ವಿಶ್ವದ ರೈತರ ನೆಚ್ಚಿನ ಬೆಳೆಯಾಗಿದೆ.
- 40 ಲಕ್ಷ ಕೃಷಿ ಕುಟುಂಬಗಳು ಸೆಣಬಿನ ಕೃಷಿಯಲ್ಲಿ ತೊಡಗಿವೆ. ನಾಲ್ಕು ಲಕ್ಷ ಕಾರ್ಮಿಕರು ಸೆಣಬಿನ ಉತ್ಪನ್ನದ ಉದ್ಯಮಗಳಲ್ಲಿ ಕೆಲಸ ಮಾಡುತ್ತಿದ್ದಾರೆ.